ಕುಳ್ಳಿರಿಸಿ ಪೆಡಲ್ ತುಳಿದು ತೋಲ ತಪ್ಪಿದರೂ ಹತೋಟಿಯಲ್ಲಿ ಚಲಿಸಿದರು. ಪೆಡಲ್ ತುಳಿದಾಗೊಮ್ಮೆ ಮಾಸ್ತರರ ಗದ್ದ ಜನಾರ್ದನನ ನೆರೆತ ಕೂದಲ ತಲೆಗೆ ಗುದ್ದುತ್ತಿತ್ತು. ಅರವತ್ತು ದಾಟಿದ ವೃದ್ಧರ ಸವಾರಿ ನೋಡಿ ರಸ್ತೆಯಲ್ಲಿ ನಡೆಯುತ್ತಿದ್ದವರು ಕ್ಷಣಕಾಲ ಹೊರಳಿ ನಿಂತು ಮುಗುಳ್ನಕ್ಕು ಮುಂದೆ ಸಾಗಿದರು. ಮಾಸ್ತರರ ಮುಖಕ್ಕೆ ಸ್ಥಿರವಾಗಿ ಅಂಟಿಕೊಂಡ ಬಿಡಿಸಿದ ಕೊಡೆಯಂತಿದ್ದ ನಗು ಗುಂದದ ಶಾಲೆ ತಲಪುವ ತನಕ ಮಡಚಿಕೊಳ್ಳಲಿಲ್ಲ. ಶಾಲೆಗೆ ರಜೆಯಿತ್ತು. ನೀರವ ಅಂಗಳದ ಧ್ವಜದ ಕಟ್ಟೆಗೆ ಸೈಕಲ್ ಚಾಚಿ, 'ನಾವು ಓದಿದ ಶಾಲೆ' ಎಂದರು. ಜನಾರ್ದನ ಅವರ ಮಾತನ್ನು ಪುನರುಚ್ಚರಿಸಿದ. ಮೆಟ್ಟಲೇರಿದ ಮಾಸ್ತರನ್ನು ಅನುಸರಿಸಿ ಅವರ ನೋಟವನ್ನು ಕೂಡಿ ತೆರೆದ ಕಿಟಕಿಯಿಂದ ನುಣ್ಣನೆಯ ಬೇಂಚುಗಳು, ಗ್ಲೋಬಿಟ್ಟ ಕಪಾಟು, ಗುರೂಜಿಯ ಕುರ್ಚಿ-ಮೇಜು, ಗೋಡೆಗೆ ನೇತು ಬಿದ್ದ ಗಾಂಧೀಜಿಯವರ ಫೋಟೊ, ಮನುಷ್ಯ ಶರೀರದ ನರ ವ್ಯವಸ್ಥೆಯ ಚಿತ್ರಪಟವನ್ನು ಹಣಕಿ ನೋಡಿದ. 'ನಾವು ಮುಲ್ಕಿ ಓದ್ತಿದ್ದಾಗ ಶೆಟ್ಟಿ ಮಾಸ್ತರು ಇದೇ ಖೋಲೀಲಿ ಇಂಗ್ಲಿಶ್ ಕಲಿಸ್ತಿದ್ರು' ಮಾಸ್ತರ ಮಾತು ಅವನ ಹೊರಗೇ ಉಳಿಯಿತು. ಹೊರಗೋಡೆಯ ಬೋರ್ಡಿನಲ್ಲಿ ಬರೆದಿದ್ದ ಪಂಚಾಂಗ ತೋರಿಸಿದರು. ಜನಾರ್ದನನ ಮುಖದ ನಿರ್ಭಾವುಕ ಚಹರೆ ಬದಲಾಗಲಿಲ್ಲ. ಪೀರಿಯಡ್ಡಿನ ಗಂಟೆ ಬಾರಿಸಿದರು. ಕಿವಿ ಮುಚ್ಚಿದ. ಸೈಕಲ್ ದೂಡುತ್ತ ವೆಂಕಟ್ರಮಣ ದೇವಸ್ಥಾನದ ಜನದಟ್ಟಣೆಯ ರಥಬೀದಿ ಹೊಕ್ಕರು. ಆಗಾಗ ಬರುತ್ತಿದ್ದ ಜಾಗ ಅದು. ಎಣ್ಣೆ ವಾಸನೆಯ ಕಳಚಿದ ರಥದ ಶೆಡ್ಡಿನೆದುರು ನಿಲ್ಲಿಸಿದರು. ಬೀದಿಯ ಆಚೀಚೆಯ ಸಾಲು ವ್ಯಾಪಾರದ ಗದ್ದಲಕ್ಕೂ ಅವನು ಸ್ಪಂದಿಸಲಿಲ್ಲ. ಉತ್ಸವ ಮೂರ್ತಿಯ ಪಲ್ಲಕ್ಕಿ ಹೊತ್ತ ಮಡಿ ಉಡುಗೆಯ ವಯಸ್ಕರು ಹಿಡಿದ ಹಿಲಾಲ ಹಿಂದೆ ವಾದ್ಯ ಮೇಳದವರ ಜತೆ ಮೆರವಣಿಗೆ ಹೊರಟಿದ್ದರು. ದೀಪೋತ್ಸವದಲ್ಲಿ ಮಿನುಗುತ್ತಿದ್ದ ದೇವರಿಗೆ ವಂದಿಸಿ ಗುಬ್ಬಿ ಕುಪ್ಪಳಿಸುತ್ತಿದ್ದ ಅಕ್ಷತೆ ಹರಡಿದ ನಗಾರಿ ತೂಗಿದ ಗೋಡೆಯ ಚಂದ್ರಶಾಲೆಯಲ್ಲಿ ಕುಳಿತರು. ಗರುಡ ಮತ್ತು ಹನುಮಂತನಚಿತ್ರಬಿಡಿಸಿದ್ದಗರ್ಭಗುಡಿಯನ್ನುಪ್ರದಕ್ಷಿಣೆ ಹಾಕುತ್ತಿದ್ದ ಉದ್ದನಾಮದ ಗೃಹಸ್ಥರು ಹತ್ತಿರ ಬಂದು, ಗುಣವಾಗ್ತದೆ. ದೇವರು ದೊಡ್ಡವನಿದ್ದಾನೆ, ಅಲ್ರಿ ಎಂದು ಕರುಣೆಯಿಂದ ನೋಡಿ ಪ್ರಸಾದ ಕೊಟ್ಟು ಹೋದರು. ದೇವಸ್ಥಾನದಲ್ಲಿ ತನ್ನತ್ತ ನೋಡಿದವರಿಗೆ ಕೈ ಮುಗಿದು ನಮಿಸುವುದೇ ಅವನ ಕಾಯಕವಾಯಿತು. ಮಾಸ್ತರರಿಗೆ ಮುಜುಗರವಾಯಿತು. ಮಹಾಮಂಗಳಾರತಿಯವರೆಗೆ ಕಾಯುವ ಮನಸಾಗಲಿಲ್ಲ. ಚಿತ್ತರಂಜನ್ ಟಾಕೀಜಿನ ಗೇಟಿನ ಸನಿಹ ಸೈಕಲ್ ನಿಲ್ಲಿಸಿದರು. ತಿಂಗಳಿಗೊಂದು ಪ್ರದರ್ಶನವೂ ನಡೆಯದೆ ಅದು ಮುಚ್ಚುವ ಸ್ಥಿತಿಗೆ ಬಂದಿತ್ತು. ಟೀಚರ್ ಟ್ರೇನಿಂಗ್ ಮುಗಿದು ಮಾಸೂರಿನ ಲೋವರ್ ಪ್ರೈಮರಿಯಲ್ಲಿ ಮಾಸ್ತರ ವೃತ್ತಿ ಶುರುವಾದ ಉಮೇದಿ ದಿನಗಳಲ್ಲಿ ಡೆಸ್ಕ್‌ಮೇಟ್ ಜನಾರ್ದನನ ಜೊತೆಯಲ್ಲಿ ಸೆಕೆಂಡ್ ಶೋ ಸಿನಿಮಾ ತಪ್ಪಿಸುತ್ತಿರಲಿಲ್ಲ. ಟಾಕೀಜು ಪಾಳು ಸುರಿಯುತ್ತಿತ್ತು. ಬಿಳುಚಿದ ಚಿತ್ರದ ಕಟೌಟ್ ಅರ್ಧ ಜಾರಿ ಕುಸಿದು ಬೀಳುವ ಸ್ಥಿತಿಯಲ್ಲಿತ್ತು. ಹುಲ್ಲು, ಗಿಡಗಳು ಬೆಳೆದು ಅವಶೇಷವಾಗಿತ್ತು. 'ಕೃಷ್ಣದೇವರಾಯ' ಸಿನಿಮಾ ಐದು ಸಲ ನೋಡಿದ್ದು ನೆನಪಾಗ್ತದಾ?' ಮಾಸ್ತರ ಪ್ರಶ್ನೆಗೆ ಜನಾರ್ದನ, 'ಪ್ರಭು ಅಕ್ಕಿ ಮಿಲ್ಲು ಎಲ್ಲುಂಟೊ ದೋಸ್ತಾ?' ಎಂದ. 'ಹತ್ತು ಸೈಕಲ್' ಎಂದವರೇ ಬಗ್ಗೋಣದ ಮಿಲ್ಲಿಗೆ ಹೊರಟರು.

ಕಟ್ಟೆಮನೆಯ ಹಬ್ಬ-ಹರಿದಿನಕ್ಕೆ ಕುಟ್ಟವಲಕ್ಕಿ ಮತ್ತು ಹೊದ್ದಲು ತರಲು ಪ್ರಭು ಮಿಲ್ಲಿಗೆ ಹೋಗಿ ಬಂದ ಸುದ್ದಿಯನ್ನು ಮಿತ್ರ ಮಾಸ್ತರರಿಗೆ ಜನಾರ್ದನ ವರದಿ ಮಾಡುತ್ತಿದ್ದ. ಬಗ್ಗೋಣ ರಸ್ತೆ ಇಳಕಲಾದದ್ದರಿಂದ ಸೈಕಲ್ ತುಳಿಯದೆ ಸುಂಯ್ ಎಂದು ಗಾಳಿಯಲ್ಲಿ ತೇಲಿಹೋದರು. ದೊಡ್ಡಕಟ್ಟೆ ಅಶ್ವತ್ಥ ಮರದ ನೆರಳಲ್ಲಿ ಚಿರೆಗಲ್ಲಿನ, ಹಂಚಿನ ಮಾಡಿನ ಗಿರಣಿ. ಗಿರಣಿಗೆ ಬರುವ ಗಿರಾಕಿಗಳನ್ನು ನಮಿಸುವಂತೆ ಬಾಗಿದ ಪ್ರಭುರವರ ಹಿತ್ತಲ ತೆಂಗಿನ ಮರಗಳು. ಬ್ರೇಕ್ ಹಿಡಿಯಲು ಮರೆತು ಸೈಕಲ್ ಸರಳಿನ ಗೇಟಿಗೆ ಡಿಕ್ಕಿಯಾಗುವಷ್ಟು ಹತ್ತಿರ ನಿಂತಿತು. ಗಿರಣಿಯ ಸಿಮೆಂಟ್ ಚಿಟ್ಟೆಯ ಮೇಲೆ ಕೇಸರಿ ಲುಂಗಿ ಸುತ್ತಿ ಕೂತಿದ್ದ ಬೋಳು ಮಂಡೆಯ ವೃದ್ಧ ಪ್ರಭುಗಳು, 'ಹೋ ಹೋ ಸಾವಕಾಶ್' ಎನ್ನುತ್ತ ಎದ್ದು ನಿಂತರು. ಪ್ರಭುಗಳು ಜನಾರ್ದನನತ್ತ ಬೆರಳು ಮಾಡಿ, ಕಣ್ಣು ಕಿರಿದುಗೊಳಿಸಿ 'ಕಟ್ಟೆಮನೆ... ಜನ್ನು...' ಎಂದು ಗೊಂದಲಿಸುತ್ತ ಗುರುತಿಸಲು ಯತ್ನಿಸಿದರು. ಮಾಸ್ತರರು ತಲೆ ಅಲ್ಲಾಡಿಸುತ್ತಲೆ 'ಪ್ರಭುಗಳು ಅದೆ ನೋಡ್ವೆ, ಬಾಳ ವರ್ಷಾಯ್ತು...' ಎನ್ನುತ್ತ ಸನಿಹ ಬಂದು, 'ಚಹಾ ಆಗ್ತದೊ ಕಷಾಯ ಮಾಡಿಸಲೋ, ಎದುರು ಕಾಣೋದೆ